ಅಧ್ಯಕ್ಷರು.— ಮಾನ್ಯ ವೆಂಕಟೇಶ್ ಅವರೆ, ತಮ್ಮನ್ನು ನಾನು ಮಾತನಾಡಲು ಕರೆದಿಲ್ಲ; ನಾನಂ ಪದೇ ಪದೇ ತಮಗೆ ಹೇಳಬೇಕಾಗಿಲ್ಲ. ನೀವು ಇನ್ನೂ ಹೊಸ ಸದಸ್ಯರು. ಬಾಕಿ ಹಿರಿಯ ಸದಸ್ಯರು ಯಾವ ರೀತಿ ನಡೆದುಕೊಳ್ಳುತ್ತಾರೆಂದು ನೋಡಿ. ನೀವು ವಾಟಾಳ್ ನಾಗರಾಜ್ ಅವರನ್ನು ಮಾತ್ರ ತಾವು ಅನುಕರಣೆ ಮಾಡಬೇಡಿ...

ಶ್ರೀ ವಾಟಾಳ್ ನಾಗರಾಜ್.— ನಾನು ತಮ್ಮ ಮಾತಿಗೆ ಮನ್ನಣೆ ಕೊಟ್ಟಿದ್ದೇನೆ. ಈ ಕಾವೇರಿ ಜಲವಿವಾದದ ಬಗ್ಗೆ ರಚಿಸಲಾಗಿರುವ ಸಮಿತಿ ಸಭೆಯನ್ನು...

(ಗೊಂದಲ)

ಅಧ್ಯಕ್ಷರು.— ಅತಿ ಶೀಘ್ರದಲ್ಲಿಯೇ ಆ ಸಮಿತಿಯ ಸಭೆಯನ್ನು ಕರೆಯುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆ ಸಭೆಯ ಮುಂದೆ ಎಲ್ಲಾ ವಿಚಾರಗಳನ್ನೂ ಮಂಡಿಸಂತ್ತೇವೆ ಎಂದೂ ಹೇಳಿದ್ದಾರೆ. ಮತ್ತೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಏನಾಯಿತೆಂದು ಕೇಳಿದ್ದೀರಿ, ಅದಕ್ಕೆ ನಾನೇ ಉತ್ತರ ಹೇಳಿದ್ದೇನೆ, ಅದು ಇನ್ನೂ ಪೆಂಡಿಂಗ್‌ನಲ್ಲಿ ಇದೆ ಎಂದು. ಈಗ ಕಮರುಲ್ ಇಸ್ಲಾಂ ಅವರೆ ತಾವು, ತಮ್ಮ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ...

ಗಮನ ಸೆಳೆಯುವ ಸೂಚನೆಗಳು

೧) ದಿನಾಂಕ ೨೯,೩೦ ರಂದು ಮೈಸೂರಿನಲ್ಲಿ ನಡೆದ ಗಲಭೆ

† SRI QUAMARUL ISLAM.— I call the attention of the Hon'ble Chief Minister to the group clashes occured in Mysore between 29th and 30th of May 1990.

ಶ್ರೀ ಎಂ. ವೀರಪ್ಪಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಗಳ ಪರವಾಗಿ ಈ ಲಿಖಿತ ಹೇಳಿಕೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನನ್ನ ಹತ್ತಿರ ಉತ್ತರ ಇಂಗ್ಲೀಷ್‌ನಲ್ಲಿದೆ, ಅದನ್ನೇ ಕನ್ನಡಕ್ಕೆ ತರ್ಜುಮೆ ಮಾಡಿ ಹೇಳುತ್ತೇನೆ.

ಶ್ರೀ ಕಮರುಲ್ ಇಸ್ಲಾಂ.— ನನಗೆ ಕನ್ನಡ ಬರುತ್ತದೆ, ಆದರೆ ಚೆನ್ನಾಗಿ ಬರುವುದಿಲ್ಲ, ಕನ್ನಡದಲ್ಲಿ ನನಗೆ ಮಾತನಾಡುವುದಕ್ಕೆ ಬರುತ್ತದೆ. ಆದ್ದರಿಂದ ಇಂಗ್ಲೀಷಿನಲ್ಲೇ ಓದಿ...

ಅಧ್ಯಕ್ಷರು.— ತಮಗೆ ಇಂಗ್ಲೀಷ್ ಪ್ರತಿ ಬಂದಿದೆ, ಅದನ್ನೇ ನೋಡಿಕೊಂಡು ಸಪ್ಲಿಮೆಂಟರಿ ಪ್ರಶ್ನೆ ಕೇಳಿ...

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಕಮರುಲ್ ಇಸ್ಲಾಂ ಅವರು, ಅವರಿಗೆತಿಳಿದಂತೆ ಕನ್ನಡದಲ್ಲಿ ಮಾತನಾಡಲಿ; ನಾವು ಯಾರೂ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನೂ ನಾವು ಒಪ್ಪುತ್ತೇವೆ. ಸ್ವಲ್ಪ ತಪ್ಪು ತಪ್ಪು ಮಾತನಾಡಿದರೂ ನಾವು ಸಂತೋಷ ಪಡೋಣ.

† ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ನೀಡುತ್ತಿದ್ದೇನೆ. ಈ ಉತ್ತರ ಇಂಗ್ಲೀಷ್‌ನಲ್ಲಿದೆ, ಇದನ್ನು ಕನ್ನಡದಲ್ಲಿ ತರ್ಜುಮೆಮಾಡಿ ನಾನು ಉತ್ತರ ಕೊಡುತ್ತೇನೆ.

ತಾರೀಖು ೨೯-೫-೯೦ ರಂದು ಕರ್ನಾಟಕ ರಾಜ್ಯ ರೈತ ಸಂಘದವರು ಒಂದು ವಿಭಾಗೀಯ ಮಟ್ಟದ ಸಭೆಯನ್ನು ಮೈಸೂರು ನಗರದಲ್ಲಿ ಏರ್ಪಾಡು ಮಾಡಿದ್ದರು. ಕಾವೇರಿ ನದಿ ನೀರಿನ ವಿವಾದದ ಸಂಬಂಧವಾಗಿ ಹಾಗೂ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಈ ಸಭೆಯನ್ನು ಏರ್ಪಾಡು ಮಾಡಲಾಗಿತ್ತು. ಈ ಒಂದು ಸಭೆಗೆ ಮೈಸೂರು, ಮಂಡ್ಯ, ಹಾಸನ ಮತ್ತು ಕೊಡಗು ಜಿಲ್ಲೆಗಳ ರೈತರು ಹಾಜರಾಗಿದ್ದರು. ಅವರು ಬರುವಾಗ ಬಸ್‌ಗಳಲ್ಲಿ ಲಾರಿಗಳಲ್ಲಿ ಟ್ರ್ಯಾಕ್ಟರ್‌ಗಳಲ್ಲಿ ಮತ್ತು ಇನ್ನಿತರ ವಾಹನಗಳಲ್ಲಿ ಈ ಸಭೆಗೆ ಬಂದಿದ್ದರು. ಈ ವಾಹನಗಳಲ್ಲಿ ಮಂಡ್ಯದ ಕಡೆಯಿಂದ ರೈತರು ಬರುವಾಗ ಅವರು ಅಶೋಕಾ ರಸ್ತೆ ಕಡೆ ಬಂದಾಗ, ಸುಮಾರು ೧೦ ವಾಹನಗಳು

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲವೆಂದ ಸೂಚಿಸಂತ್ತದೆ.

ದಾರಿಯನ್ನು ಬದಲಾಯಿಸಿ ಫಲಿಕೇಶಿ ರಸ್ತೆಗೆ ಬಂದಾಗ ಟ್ರಾಫಿಕ್ ಜಾಮ್ ಆಯಿತು. ಆಗ ಕೆಲವು ಕಿಡಿಗೇಡಿಗಳು ಕಲ್ಲುಗಳನ್ನು ಎರಡು ವಾಹನಗಳ ಮೇಲೆ ತೂರಿದರು. ಇದರಿಂದ ಸಿಟ್ಟುಗೊಂಡ ರೈತರು ವಾಹನಗಳಿಂದ ಕೆಳಗಿಳಿದು ಅವರೂ ಕೂಡಾ ಕಲ್ಲುಗಳನ್ನು ಆಟೋರಿಕ್ಷಾಗಳ ಕಡೆಗೆ ಬೇರೆ ವಾಹನಗಳ ಕಡೆಗೆ, ಅಂಗಡಿಗಳ ಕಡೆಗೆ ತೂರಾಡಿದರು. ಮತ್ತು ಮೂರು ಮೊಪೆಡ್‌ಗಳು ಸುಡಲ್ಪಟ್ಟವು ಈ ರೈತರ ಸಭೆಯು ಟೌನ್‌ಹಾಲ್‌ನಲ್ಲಿ ನಡೆಯುತ್ತಿರುವಾಗ ಇನ್ನೂ ಕೆಲವು ಕಡೆ ಕಲ್ಲುಗಳನ್ನು ತೂರಾಡತಕ್ಕ ಘಟನೆಗಳು ನಡೆದವು. ಆಟೋರಿಕ್ಷಾಗಳ ಮೇಲೆ, ಮಂಡಿಮೊಹಲ್ಲಾ, ಲಷ್ಕರ್ ಮೊಹಲ್ಲಾ ಮುಂತಾದ ಕಡೆ ನಡೆದವು. ಇದರಿಂದಾಗಿ ನಾಲ್ಕು ಜನ ಗಾಯಗೊಂಡಿದ್ದರು. ೯ ಆಟೋರಿಕ್ಷಾಗಳಿಗೆ ಡ್ಯಾಮೇಜ್ ಆಯಿತು. ಮತ್ತು ಮೂರು ಮೊಪೆಡ್‌ಗಳು ಸುಡಲ್ಪಟ್ಟವು. ತಾರೀಖಿನ ೨೯-೫-೯೦ ರಂದು ಅಂದರೆ ಅದೇ ದಿವಸ ಸುಮಾರು ನಾಲ್ಕು ಘಂಟೆಗೆ ಮಂಡಿ, ಲಷ್ಕರ್ ಮತ್ತು ಎನ್. ಆರ್. ಮೊಹಲ್ಲಾಗಳಲ್ಲಿ ಪ್ರತಿಬಂಧಕಾಜ್ಞೆಯನ್ನು ಘೋಷಿಸಲಾಯಿತು. ನಾಲ್ಕೂವರೆ ಘಂಟೆಗೆ ಶ್ರೀ ಅಯ್ಯಾಜ್ ಪಾಷಾ ಎಂಬುವರು ಆ ಲಷ್ಕರ್ ಮೊಹಲ್ಲಾ ಕಡೆಗೆ ಅವರ ಗೆಳೆಯರ ಜೊತೆಯಲ್ಲಿ ಹೋಗುತ್ತಿದ್ದರು. ನಾಲ್ಕು ವ್ಯಕ್ತಿಗಳು ಅಯಾಜ್ ಪಾಷಾ ಮತ್ತು ಅವರ ಗೆಳೆಯರನ್ನು ಬೆದರಿಸಿದಾಗ ಅಯಾಜ್‌ಪಾಷಾ ಅವರು ಮತ್ತು ಅವರ ಗೆಳೆಯರು ಹೆದರಿಕೆಯಿಂದ ಓಡಿಹೋದರು. ಈ ಸಂದರ್ಭದಲ್ಲಿ ಇಬ್ಬರು ಅಯಾಜ್‌ಪಾಷಾ ಅವರನ್ನು ಗಾಯಗೊಳಿಸಿದರು. ಅವರನ್ನು ಗಾಯಗೊಳಿಸಿದ ಆಯುಧಗಳು ಎಂದರೆ ಸೈಕಲ್ ಚೈನ್‌ಗಳು ಮತ್ತು, ಅಯಾಜ್‌ಪಾಷಾ ಅವರಿಂದ ಐದುನೂರು ರೂಪಾಯಿಗಳನ್ನು ಕಸಿದುಕೊಳ್ಳಲಾಯಿತು. ಅಯಾಜ್‌ಪಾಷಾ ಅವರನ್ನು ಅನ್‌ಕಾನ್ಷಿಯಸ್ ಸ್ಟೇಜ್‌ನಲ್ಲಿ ಅವರ ಮನೆಗೆ ತೆಗೆದುಕೊಂಡು ಹೋಗತಕ್ಕಂಥ ಸಂದರ್ಭದಲ್ಲಿ ಬಹಳ ಜನ ಅಯಾಜ್‌ಪಾಷಾ ಅವರ ಮನೆಯ ಸುತ್ತಮುತ್ತ ನೆರೆದಿದ್ದರು. ಅವರಲ್ಲಿ ಹಿಂದೂಗಳು ಅಟ್ಯಾಕ್ ಮಾಡಿರಬೇಕೆಂಬ ಒಂದು ಭಾವನೆ ಬಂತು. ಈ ಕೆಲವು ಕಿಡಿಗೇಡಿಗಳು ಒಬ್ಬ ದೇವರಾಜ್ ಎಂದು ಹೇಳಿ ಯಾರಿದ್ದರು ಅವರು ಹೋಗತಕ್ಕಂಥ ಸಂದರ್ಭದಲ್ಲಿ ಅವರಿಗೆ ತಿಳಿದರು. ಅವರು ಆಟೋರಿಕ್ಷಾದಲ್ಲಿ ಹೋಗುವಾಗ ಕಾಂತರಾಜ್ ಪಾರ್ಕ್ ರಸ್ತೆಯಲ್ಲಿ ಈ ಘಟನೆ ನಡೆಯಿತು. ಶ್ರೀ ದೇವರಾಜ್ ಎಂಬುವರು ಆ ಜಗಳದಲ್ಲೇ ಮೃತ ಹೊಂದಿದರು. ದೇವರಾಜ್ ಮೃತನಾದ ವರ್ತಮಾನ ಸಾಕಷ್ಟು ಪ್ರಚಾರವಾಗಿ ಕೆಲವು ಕಿಡಿಗೇಡಿಗಳು ಇಮ್ತಿಯಾಜ್‌ಪಾಷಾ ಎಂಬುವರನ್ನು ತಿಳಿದರು. ಅವರು ಕೂಡಾ ಸತ್ತರು ಎಂದು ಹೇಳಿ ಘೋಷಣೆ ಆಯಿತು. ಮತ್ತೆ ಆಸ್ಪತ್ರೆಗೆ ಕೂಡಾ ಅವರನ್ನು ತೆಗೆದುಕೊಂಡು ಹೋಗಲಾಯಿತು. ಈ ಎಲ್ಲಾ ಘಟನೆಗಳು ನಡೆದ ಕಾರಣ, ಮಂಡಿ, ಲಷ್ಕರ ಮತ್ತು ಎನ್. ಆರ್. ಮೊಹಲ್ಲಾಗಳಲ್ಲಿ ಸಾಕಷ್ಟು ಶೋಭೆ ಉಂಟಾಯಿತು ದಿನಾಂಕ ೩೧-೫-೯೦ ರಂದು ಸ್ಪೇಸ್ ಇನ್ಸಿಡೆಂಟ್ ಆಫ್ ಅಸಾಲ್ಟ್ ಆನ್ ಹಿಂದೂ ಕಪಲ್ ಆಯಿತು, ಅವರು ಶ್ರೀರಂಗಪಟ್ಟಣಕ್ಕೆ ಹೋಗತಕ್ಕ ರಸ್ತೆಯಲ್ಲಿ. ಇದು ನಡೆಯಿತು. ಮತ್ತೆ ಇನ್ನೊಂದು ತಿವಿತದ ಘಟ್ಟನೆ ಬೆಂಗಳೂರು, ಮೈಸೂರು ಹೈವೆಯಲ್ಲಿ ಆಯಿತು ಶ್ರೀ ಫಿಲೋಮಿನ ರಾಜ್ ಅವರ ಮೇಲೆ ಇದು ನಡೆಯಿತು. ಅವರನ್ನು ಕೂಡಲೇ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಅವರು ಅಪಾಯದಿಂದ ಹಂತದಿಂದ ಪಾರಾಗಿದ್ದಾರೆ. ದಿನಾಂಕ ೩-೬-೯೦ ರಂದು ಅಸ್ಲಾಂಪಾಷಾ ಎಂಬುವರು ಜುಡಿಷಿಯಲ್ ಕಸ್ಟಡಿಯಲ್ಲಿದ್ದರು. ಅವರಿಗೆ ಒಂದು ತರಹ ಮಾನಸಿಕ ರೋಗಕ್ಕೆ ಒಳಗಾಗಿ ೬-೬-೯೦ ರಂದು ಮೃತರಾದರು. ಆದುದರಿಂದ ಈ ಮೂರು ಮರಣಗಳು ಅಲ್ಲದೆ ೪೦ ಜನರಿಗೆ ಈ ಘಟನೆಯಿಂದ ಗಾಯಗಳಾಗಿವೆ. ಅಯಜ್‌ಪಾಷ ಅವರು ಮರಣ ಹೊಂದಿದ್ದಾರೆಂಬ ಕಾರಣದಿಂದ ಈ ಎಲ್ಲ ಗೊಂದಲಗಳು ಉಂಟಾದವು. ಸಂಮಾರು ೬೦ ಕೇಸುಗಳನ್ನು ಮೈಸೂರುನಗರದ ಬೇರೆಬೇರೆ ಪೋಲೀಸ್ ಠಾಣೆಗಳಲ್ಲಿ ದಾಖಲು ಮಾಡಿಕೊಳ್ಳಲಾಗಿದೆ. ಸುಮಾರು ೩೧೫ ಮಂದಿಯನ್ನು ಅರೆಸ್ಟ್ ಮಾಡಲಾಗಿದೆ. ಯಾರು ಯಾರು ಈ ಘಟನೆಗಳಿಗೆ ಕಾರಣಭೂತರಾಗಿದ್ದರು. ಅವರ ಬಗ್ಗೆ ಕೆಲವು ಮಾಹಿತಿಗಳು ದೊರಕಿವೆ. ಅವರನ್ನು ಹುಡುಕಲು ತೀವ್ರವಾದಂಥ ಒಂದು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಸೀನಿಯರ್ ಪೋಲೀಸ್ ಆಫೀಸರ್‌ಗಳು ಬಂದೋಬಸ್ತು ಅರೇಂಜ್‌ಮೆಂಟ್‌ಗಳನ್ನು ಮಾಡಿದ್ದಾರೆ. ಸಾಕಷ್ಟು ಕಾಳಜಿಯನ್ನು ವಹಿಸಿ ಅದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಕೆ.ಎಸ್.ಆರ್.ಪಿ.ಸಿ.ಯ ಸಾಕಷ್ಟು ಪಡೆಗಳು ಮತ್ತು ಡಿಸ್ಟ್ರಕ್ ಆರ್ಮ್‌ಡ್ ಪೋರ್ಸ್‌ನ ಪ್ಲಾಟೂನ್‌ಗಳು ಈಗಾಗಲೆ ಅಲ್ಲಿ ನೆಲೆಗೊಂಡಿವೆ. ಆದುದರಿಂದ ಈಗ ಅಲ್ಲಿ ಸಂಪೂರ್ಣವಾದ ಶಾಂತಿ ನೆಲೆಸಿದೆ. ಅಲ್ಲಿ ಯಥಾಸ್ಥಿತಿ ಇದೆ. ಸಂಪೂರ್ಣವಾಗಿ ಶಾಂತಿ ಸ್ಥಾಪನೆಯಾಗಲು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಮೈಸೂರುನಗರದಲ್ಲಿ ತೆಗೆದುಕೊಳ್ಳಲಾಗಿದೆ. ಈಗ ಮೈಸೂರುನಗರದಲ್ಲಿ ಯಾವುದೇ ರೀತಿಯ ಘಟನೆಗಳು ನಡೆದಿಲ್ಲ. ಮತ್ತು ಸಂಪೂರ್ಣವಾದ ಶಾಂತಿ ವಾತಾವರಣ ಬಂದಿದೆ.

SRI D.B. CHANDRE GOWDA.—Before the Hon'ble Member seeking clarification, I would like to appeal to the Chair that this is an important matter. I would appeal that it should be taken up for discussion in one form or the other because we could not sign this Notice.

MR. SPEAKER.—The debate on the Department of Home is coming up, may be in the coming week. This could as well form part of it.

SRI D. B. CHANDRE GOWDA —There is a very long statement which requires number of clarifications from the Government. I would therefore appeal to you to allow for a discussion in one form or the other. I leaved it to the decision of the Chair.

SRI QUMARUL ISLAM. —I want to seek a few clarifications. What is the reason for changing the route? The route was changed from Ashoka Road to Pulikesi Road. In the statement, you have said, Pulikesi Road is a narrow road and because of that there was a jam. I personally feel, that it is not a narrow road. Secondly, Section 34 was imposed only on the Mandy Mohalla area. Thirdly, the persons who have been arrested majority of them belonged to Mandi Mohalla area only and lastly, what you have said in this statement is not convincing. I am not satisfied with this reply. In the last para of your reply, you have stated that the loss to the properties in the City in this incident is about 5.5 lakhs and the District Commissioner, Mysore, in his order dated 1-6-1990 has already sanctioned Rs. 20,000/- to the wife of the deceased, Sri B. Devaraj. You have also stated that the compensation in respect of other deceased injured persons and to the people whose properties were damaged in the course of the said communal riots is also being examined. Whether it is a fact that in this communal riot, four people were killed and three others injured, and why compensations were not given to these injured persons?

Sir, I am not satisfied with this reply and therefore I demand that there should be a through judicial inquiry into this incident. I wanted to know whether they are ordering judicial inquiry or not into this incident.

೧೨.೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಮಗೆ ಬಂದಿರತಕ್ಕಂಥ ಮಾಹಿತಿ ಪ್ರಕಾರ ತಲಾ ೨೦ ಸಾವಿರ ರೂಪಾಯಿಗಳನ್ನು ಮೃತರ ಎಲ್ಲಾ ಸಂಬಂಧಿಕರಿಗೆ ಕೊಡಲಾಗಿದೆ. This is an additional statement I am making. As per the statement, the Deputy Commissioner has already sanctioned Rs. 20,000 to the wife of deceased Mr. Devraj. In addition to that, according to our information, the dependents of other victims have also been given the compensation. If it is not given, we will ensure that it will be given.

SRI QUMARUL ISLAM.—Why Judicial Enquiry has not been conducted? It is the duty of the Government to trace out the culprits. How the culprits will come out without the Judicial

Enquiry or atleast the COD Enquiry? We are losing faith in the Government. In other incidents for example, death in Police custody in Gulbarga, in Shahabad incidents etc., you have ordered for Judicial enquiry. Why did you not order Judicial Enquiry here?

MR. SPEAKER.—Have those Judicial Enquiries started functioning?

SRI QUMARUL ISLAM.—Yes Sir. In Gulbarga, it has started functioning.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಪೋಲೀಸ್ ಕಸ್ಟಡಿಯಲ್ಲಿ ಲಾಕಪ್ ಡೆತ್ಸ್ ಆದರೆ ನಾವು ಸಿ.ಒ.ಡಿ, ಎನ್‌ಕ್ವೈರಿಯನ್ನು ತಕ್ಷಣ ಮಾಡಿಸುತ್ತೇವೆಂದು ಹೇಳಿದ್ದಾರೆ. ಅದು ನಮ್ಮ ಸರ್ಕಾರದ ನೀತಿ ಕೂಡ ಆಗಿದೆ. ನಾವು ಅದನ್ನು ಈಗಾಗಲೇ ಘೋಷಣೆ ಮಾಡಿದ್ದೇವೆ.

SRI QUMARUL ISLAM.—Whether the Government will order for Judicial Enquiry or if not atleast COD Enquiry?

SRI M. VEERAPPA MOILY.—C.O.D Enquiry will be done.

ಅಧ್ಯಕ್ಷರು.—ಜುಡಿಷಿಯಲ್ ಎನ್‌ಕ್ವೈರಿ ಅಲ್ಲ. ಸಿ.ಒ.ಡಿ. ಎನ್‌ಕ್ವೈರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಹೌದು. ಸಿ.ಓ.ಡಿ. ಎನ್‌ಕ್ವೈರಿ.

ಅಧ್ಯಕ್ಷರು.—ಇದರಿಂದ ಮಾನ್ಯ ಸದಸ್ಯರಿಗೆ ಸಮಾಧಾನ ಆಗಿರಬಹುದು.

೨) ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮಾಸಲಾತಿ ನಿಯಮವನ್ನು ಅನುಸರಿಸುವಂತೆ ಒತ್ತಾಯ

ಶ್ರೀ ವಂಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ದಿನಗೂಲಿ ನೌಕರರನ್ನು 'ಖಾಯಂಗೊಳಿಸುವಾಗ ಮಾಸಲಾತಿ ನಿಯಮ ಅನುಸರಿಸುವುದರ ಬಗ್ಗೆ ಮುಖ್ಯ ಮಂತ್ರಿಯವರ ಗಮನ ಸೆಳೆಯಲಿಚ್ಛಿಸುತ್ತೇನೆ :—

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಓದುತ್ತೇನೆ.

ದಿನಗೂಲಿ ನೌಕರರನ್ನು ಖಾಯಂಗೊಳಿಸುವಾಗ ಮಾಸಲಾತಿ ನಿಯಮ ಅನುಸರಿಸುವ ಬಗ್ಗೆ

ಧಾರವಾಡ ಜಿಲ್ಲಾ ಲೋಕೋಪಯೋಗಿ ಇಲಾಖಾ ಯೂನಿಯನ್ ಮತ್ತು ಇತರೆ ೪ ಸಂಘಗಳು ದಿನಗೂಲಿ ಕೆಲಸಗಾರರನ್ನು ಖಾಯಂಗೊಡಿಸಬೇಕೆಂದು ಮತ್ತು ಅವರಿಗೆ ಸರ್ಕಾರಿ ನೌಕರರಿಗೆ ನೀಡುತ್ತಿರುವ ವೇತನವನ್ನು ಅವರಿಗೂ ಮಂಜೂರು ಮಾಡುವಂತೆ ಕೋರಿ ಮೇ ೧೯೮೩ರಲ್ಲಿ ಸರ್ವೋನ್ನತ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿತ್ತು. ದಿನಗೂಲಿ ಕೆಲಸಗಾರರನ್ನು ಕೆಲಸದಿಂದ ತೆಗೆಯಕೂಡದೆಂದು ದಿನಾಂಕ ೨೫-೭-೧೯೮೩ ರಂದು ಸರ್ವೋನ್ನತ ನ್ಯಾಯಾಲಯವು ಏಕಪಕ್ಷೀಯ ಮಧ್ಯಕಾಲಿಕ ಆದೇಶವನ್ನು ನೀಡಿತು.

೨. ಕರ್ನಾಟಕ ರಾಜ್ಯ ರೇಷ್ಮೆ ನೌಕರರ ಸಂಘ ಮತ್ತು ಇತರ ದಿನಗೂಲಿ ನೌಕರರ ಸಂಘಗಳು ಸರ್ವೋನ್ನತ ನ್ಯಾಯಾಲಯದ ಮುಂದೆ ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆಗಳು ೪೮೮ ಮತ್ತು ೨೩೬೬ ದಿನಾಂಕ ೨೦-೩-೧೯೮೮ ರಂದು ವಿಚಾರಣೆಗೆ ಬಂದಾಗ ೧-೪-೧೯೮೯ರಿಂದ ಜಾರಿಗೆ ಬರುವಂತೆ 'ಡಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೫೦೦ ಮಾಸಿಕ ಡಿ ಪ್ರವರ್ಗಕ್ಕೆ ಸೇರಿದ ಮಾಸಿಕ ವೇತನ ಸಿಬ್ಬಂದಿಗೆ ರೂ ೭೮೦, ಮಾಸಿಕ 'ಸಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೬೫೦ ಮಾಸಿಕ 'ಬಿ' ಪ್ರವರ್ಗಕ್ಕೆ ಸೇರಿದ ದಿನಗೂಲಿ ನೌಕರರಿಗೆ ರೂ. ೧೦೦೦ ಮಾಸಿಕವಾಗಿ ನೀಡಬೇಕೆಂದೂ ಆದೇಶಿಸಿತು. ಆದರಂತೆ ಆದೇಶ ಸಂಖ್ಯೆ ಡಿಪಿಎಆರ್ ೨೨ ಎಸ್‌ಎಲ್‌ಸಿ ೮೯, ದಿನಾಂಕ ೨೯-೪-೧೯೮೯ ರಲ್ಲಿ ದಿನಾಂಕ ೧-೪-೧೯೮೯ ರಿಂದ ಅನ್ವಯವಾಗುವಂತೆ ಆದೇಶ ನೀಡಲಾಗಿದೆ.